ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01

ಸಂಖ್ಯೆ:ಜಕೃನಿ(ಯೋ)/ರೈ.ಆ/ಎಲ್.ಎ.ಕ್ಯೂ-1820/2024-25 ದಿನಾಂಕ: 22 - 07-2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ:- ಯು ಬಿ ಬಣಕಾರ್ (ಹಿರೇಕೆರೂರು) ಮಾನ್ಯ
ವಿಧಾನ ಸಭೆಯ ಸದಸ್ಯರು ಇವರ ಚುಕ್ಕೆ
ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1820 ಕ್ಕೆ
ಉತ್ತರಿಸುವ ಕುರಿತು.
****

ಯು ಬಿ ಬಣಕಾರ್ (ಹಿರೇಕೆರೂರು) ಮಾನ್ಯ ವಿಧಾನ ಸಭೆಯ ಸದಸ್ಯರು

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1820 ಕ್ಕೆ ಮಾಹಿತಿಯನ್ನು

ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ
ವಿಶ್ವಾಸಿ

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1820
ಪ್ರಶ್ನೆ ಕೇಳಿರುವ ಸದಸ್ಯರು	ಶ್ರೀ ಬಿ ಬಣಕಾರ್ (ಹಿರೇಕೆರೂರು)
ಉತ್ತರ ನೀಡುವ ಸಚಿವರು	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	24.07.2024

ಕ್ರ ಸಂ	ಪ್ರಶ್ನೆ	ಉತ್ತರ
ಅ	ರೈತರು ಬೆಳೆದ ಬೆಳೆಗಳಿಗೆ ಕಟಾವು ಪೂರ್ವದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ (ನಿಂತ ಬೆಳೆಗೆ) ಆಕಸ್ಮಿಕವಾಗಿ ಬೆಂಕಿ ತಗುಲಿ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸದಿರಲು ಕಾರಣವೇನು, ಹಾಗಿದ್ದಲ್ಲಿ ಅವಕಾಶ ಕಲ್ಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ: (ಸಂಪೂರ್ಣ ವಿವರ ನೀಡುವುದು)	ಕಟಾವು ಪೂರ್ವದಲ್ಲಿ ಹೊಲದಲ್ಲಿ ಅಥವಾ ಗದ್ದೆಯಲ್ಲಿ ನಿಂತ ಬೆಳೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ನೀಡುವ ವಿಷಯವನ್ನು ಪರಿಶೀಲಿಸಲಾಗಿ ಕೃಷಿ ಇಲಾಖಾ ಮಾರ್ಗಸೂಚಿಯನ್ನು ತಿದ್ದುಪಡಿ ಮಾಡದಿರಲು ವಿವರಗಳು ಈ ಕೆಳಗಿನಂತಿವೆ: • ಕೇಂದ್ರ ಸರ್ಕಾರದ ನೈಸರ್ಗಿಕ ವಿಕೋಪಗಳಿಂದ ಬೆಳೆ ನಷ್ಟವಾದಲ್ಲಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಯಡಿ (ಕಂಡಿಕೆ 5.1 A & B) ನಿಂತ ಬೆಳೆಗೆ ಬೆಂಕಿ ತಗುಲಿ ಬೆಳೆ ನಷ್ಟ ಉಂಟಾದಲ್ಲಿ ಪರಿಹಾರ ನೀಡಲು ಅವಕಾಶ ಇರುವುದಿಲ್ಲ. • ವಿದ್ಯುಚ್ಛಕ್ತಿಯ ಅವಘಡದಿಂದಾಗಿ ಬೆಳೆ ನಷ್ಟವಾದಲ್ಲಿ ಸಂಬಂಧಿಸಿದ ಇಲಾಖೆಯಿಂದ ನಷ್ಟ ಅಂದಾಜಿಸಿ, ನಿಯಮಾನುಸಾರ ಪರಿಹಾರವನ್ನು ಇಂಧನ ಇಲಾಖೆಯಿಂದ ನೀಡಲಾಗುತ್ತದೆ. • ಸರ್ಕಾರದ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಮಾರ್ಗಸೂಚಿಯ ಕಂಡಿಕೆ 5.2.4 ರಡಿ ಸ್ಥಳೀಯ ವಿಕೋಪಗಳಡಿ ಅಂದರೆ ಮಿಂಚು ಕಾರಣದಿಂದ ಬೆಂಕಿ ಬಿದ್ದು, ಬೆಳೆ ನಷ್ಟವಾದಲ್ಲಿ ಪರಿಹಾರ ನೀಡಲು ಅವಕಾಶ ಇರುತ್ತದೆ. • ಬೆಳೆ ಕಟಾವು ಆಗದೆ, ಕೆಲವು ಸಂದರ್ಭಗಳಲ್ಲಿ ಆಕಸ್ಮಿಕ ಬೆಂಕಿ ತಗುಲಿ ನಿಂತ ಬೆಳೆ ನಷ್ಟವಾದಲ್ಲಿ ಬೆಂಕಿ ತಗುಲಿರುವುದು ದುಷ್ಕೃತ್ಯದಿಂದಲೇ ಅಥವಾ ಬೇರೆ ಯಾವ ಕಾರಣದಿಂದಾಗಿದೆ ಎಂಬುದನ್ನು ತಿಳಿಯುವುದು ಕಷ್ಟಸಾಧ್ಯವಾಗುವುದರಿಂದ ಯಾವುದೇ ಮಾರ್ಗಸೂಚಿಯಲ್ಲಿ ಅಳವಡಿಸಿರುವುದಿಲ್ಲ.

ಆ)	ಆಕಸ್ಮಿಕವಾಗಿ (ನಿಂತ ಬೆಳೆಗೆ) ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಕೋರಿ ರಾಜ್ಯಾದ್ಯಂತ ಎಷ್ಟು ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ : (ಜಿಲ್ಲಾವಾರು , ತಾಲ್ಲೂಕುವಾರು , ರೈತರ ಹೆಸರು ಸಹಿತ ಸಂಪೂರ್ಣ ವಿವರ ನೀಡುವುದು)	ಆಕಸ್ಮಿಕವಾಗಿ (ನಿಂತ ಬೆಳೆಗೆ) ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಸಂದರ್ಭದಲ್ಲಿ ಪರಿಹಾರ ಕೋರಿ ರಾಜ್ಯಾದ್ಯಂತ ಒಟ್ಟು 51 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ . ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ .
ಇ)	ಇಂತಹ ಪ್ರಕರಣಗಳಿಗೆ ಪರಿಹಾರ ಕಲ್ಪಿಸಲು ತಾತ್ಕಾಲಿಕವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?	ಆಕಸ್ಮಿಕವಾಗಿ (ನಿಂತ ಬೆಳೆಗೆ) ಬೆಂಕಿ ತಗುಲಿ ರೈತರ ಬೆಳೆಗಳಿಗೆ ನಷ್ಟ ಉಂಟಾದ ಪ್ರಕರಣಗಳಿಗೆ ಕೃಷಿ ಇಲಾಖೆ ಮಾರ್ಗಸೂಚಿಯಲ್ಲಿ ಪರಿಹಾರ ನೀಡಲು ಅವಕಾಶವಿಲ್ಲದಿರುವುದರಿಂದ ಸದರಿ ಪ್ರಕರಣಗಳನ್ನು ಉಪವಿಭಾಗಾಧಿಕಾರಿಯವರ ಸಮಿತಿಯಲ್ಲಿ ತಿರಸ್ಕರಿಸಲಾಗಿದೆ .

ಕೃಷ

ಿ ನಿರ್ದೇಶಕರು